**ದಿನಾಂಕಃ 03.07.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಪ್ರತಿವಾದಿ ನಂ.3 ರಿಂದ 6 ರ ಪರ ಶ್ರೀ ಎಂ ಆರ್ ಪಿ ವಕೀಲರಿಂದಃ**

ಸಾಕ್ಷಿದಾರರು ತಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಹಾಜರುಪಡಿಸಿ, ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳೆಲ್ಲವೂ ನಿಜವಿದ್ದು, ಅದರಲ್ಲಿರುವ ಸಹಿ ನನ್ನದೇ ಇರುತ್ತದೆ.

ನಿಡಿ–4 ನ್ನು ನಾನೇ ತಯಾರಿಸಿರುತ್ತೇನೆ. ಸಾಕ್ಷಿ ನಿಡಿ–4 ರ ಮೇಲಿನ ತನ್ನ ಸಹಿ ನೋಡಿ ಗುರುತಿಸಿರುತ್ತಾರೆ ಅದನ್ನು ನಿಡಿ–4(ಎಫ್) ಎಂದು ಗುರುತಿಸಲಾಯಿತು.

**ಪಾಟಿ ಸವಾಲುಃ ವಾದಿ ಪರ ಶ್ರೀ ಇ ಎನ್ ವಕೀಲರಿಂದ**.

ಆರ್ ಸಿ ಪಾಟೀಲ್ ರವರು ಕೈಬರಹದಲ್ಲಿ ಇದ್ದ ಮೃತ್ಯುಪತ್ರದ ಒಂದು ಕರಡು ಪ್ರತಿ ನಿಮಗೆ ಕೊಟ್ಟಿರುತ್ತಾರೆಂದು ಹೇಳಿರುತ್ತೀರಿ ಅದು ನಿಮ್ಮ ಬಳಿ ಇದೆಯಾ ಅಂದರೆ ಸಾಕ್ಷಿ ನಾನು ಮೃತ್ಯುಪತ್ರ ತಯಾರಿಸಿದ ನಂತರ ಕರಡುಪ್ರತಿ ಮತ್ತು ನಿಡಿ–4 ನ್ನು ಅವರಿಗೆ ವಾಪಸ್ಸು ಕೊಟ್ಟಿರುತ್ತೇನೆ ಎನ್ನುತ್ತಾರೆ. ಆರ್ ಸಿ ಪಾಟೀಲ್ ರವರ ಕೈಬರಹದಲ್ಲಿದ್ದ ಮೃತ್ಯುಪತ್ರದ ಕರಡುಪ್ರತಿ ಆಧಾರಿಸಿ ನಿಡಿ–4 ನ್ನು ತಯಾರಿಸಿರುತ್ತೇನೆಂದು ನಿಡಿ–4 ರಲ್ಲಿ ನಮೂದಿಸಿಲ್ಲ ಅಂದರೆ ಸರಿ. ನಿಡಿ–4 ನ್ನು ಯಾವ ದಿನ, ಎಲ್ಲಿ ತಯಾರಿಸಿರುತ್ತೀರಿ ಅಂದರೆ ಸಾಕ್ಷಿ 2012 ನೇ ಇಸವಿಯಲ್ಲಿ ಸೊರಬದ ಸಾಗರ ರಸ್ತೆಯಲ್ಲಿರುವ ಪ್ರಭು ಕಂಪ್ಯೂಟರ್ಸನಲ್ಲಿ ತಯಾರಿಸಿರುತ್ತೇನೆ ಎನ್ನುತ್ತಾರೆ. ನಿಡಿ–4 ನ್ನು ಗಣಕೀಕರಿಸಿದವರ ಸಹಿಯನ್ನು ಪಡೆದಿಲ್ಲ ಅಂದರೆ ಸಾಕ್ಷಿ ಅಗತ್ಯವಿಲ್ಲದ ಕಾರಣ ಸಹಿ ಪಡೆದಿಲ್ಲ ಎನ್ನುತ್ತಾರೆ. ಆರ್ ಸಿ ಪಾಟೀಲ್ ರವರ ಪರಿಚಯ ನಿಮಗೆ ವೈಯಕ್ತಿಕವಾಗಿ ಇರುತ್ತದೆ ಅಂದರೆ ಸಾಕ್ಷಿ 2010 ರ ನಂತರ ನನಗೆ ಅವರ ಪರಿಚಯ ಆಗಿರುತ್ತದೆ ಎನ್ನುತ್ತಾರೆ. 2011 ನೇ ಇಸವಿಯಿಂದ ಆರ್ ಸಿ ಪಾಟೀಲ್ ರವರ ಆರೋಗ್ಯ ಸರಿ ಇರಲಿಲ್ಲ ಅವರು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು ಅಂದರೆ ಸಾಕ್ಷಿ ಅವರಿಗೆ ವಯೋ ಸಹಜ ಖಾಯಿಲೆ ಬಿಟ್ಟರೆ ಮಾನಸಿಕವಾಗಿ ಸಧೃಡರಿದ್ದರು ಎನ್ನುತ್ತಾರೆ. ನಿಡಿ–4 ನ್ನು ಗಣಕೀಕರಿಸಬೇಕಾದರೆ ಯಾರ್–ಯಾರು ಇದ್ದರು ಅಂದರೆ ಸಾಕ್ಷಿ ಗಣಕೀಕರಿಸುವಾಗ

ಯಾರು ಇರಲಿಲ್ಲ ಗಣಕೀಕರಿಸಿದ ನಂತರ ನಾನು ನಿಡಿ–4 ನ್ನು ನೋಂದಣಿ ಕಚೇರಿಗೆ ತೆಗೆದುಕೊಂಡು ಹೋಗಿರುತ್ತೇನೆ ಆ ಸಮಯದಲ್ಲಿ ಆರ್ ಸಿ ಪಾಟೀಲ್, ವೀರಬಸಪ್ಪ ಮತ್ತು ಬಸವರಾಜಪ್ಪ ಇದ್ದರು ಎನ್ನುತ್ತಾರೆ. ನೋಂದಣಿ ಕಚೇರಿಯಲ್ಲಿ 3 ನೇ ಪ್ರತಿವಾದಿಯ ತಂದೆ ಇದ್ದರಾ ಅಂದರೆ ಸಾಕ್ಷಿ ನಾನು ಮೇಲೆ ಹೇಳಿದ 3 ಜನರು ಮಾತ್ರ ಇದ್ದರು ಎನ್ನುತ್ತಾರೆ. ಉಪನೋಂದಣಿ ಕಚೇರಿಗೆ ಎಷ್ಟು ಗಂಟೆಗೆ ಹೋಗಿರುತ್ತೀರಿ ಅಂದರೆ ಸಾಕ್ಷಿ 11.00 ಗಂಟೆಗೆ ಹೋಗಿರುತ್ತೇನೆ ಎನ್ನುತ್ತಾರೆ. ನೋಂದಣಿ ಕಚೇರಿಯಲ್ಲಿ ಎಷ್ಟು ಸಮಯದವರೆಗೆ ಇದ್ದೀರಿ ಅಂದರೆ ಸಾಕ್ಷಿ ಅರ್ಧ ಗಂಟೆಯಿಂದ ಮುಕ್ಕಾಲು ಗಂಟೆ ಇದ್ದೇವು ಎನ್ನುತ್ತಾರೆ. ನಿಡಿ–4 ನೋಂದಣಿ ಆದ ನಂತರ ಅದನ್ನು ಯಾರ ಕೈಗೆ ಕೊಟ್ಟಿರುತ್ತೀರಿ ಅಂದರೆ ಸಾಕ್ಷಿ ಆರ್ ಸಿ ಪಾಟೀಲ್ ರವರ ಕೈಗೆ ಕೊಟ್ಟಿರುತ್ತೇನೆ ಎನ್ನುತ್ತಾರೆ. ನಿಡಿ–4 ಕ್ಕೆ ಸಹಿಗಳನ್ನು ಎಲ್ಲಿ ಪಡೆದಿರುತ್ತೀರಿ ಅಂದರೆ ಸಾಕ್ಷಿ ನೋಂದಂಣಿ ಕಚೇರಿಯಲ್ಲಿ ಪಡೆದಿರುತ್ತೇನೆ ಎನ್ನುತ್ತಾರೆ. ನಿಡಿ–4 ಕ್ಕೆ ಸಾಕ್ಷಿಗಳ ಸಹಿಗಳನ್ನು ನೀವೇ ಪಡೆದಿರುತ್ತೀರಿ ಅಂದರೆ ಸರಿ. ಮೃತ್ಯುಪತ್ರದ ಕರಡುಪ್ರತಿಯನ್ನು ತಮ್ಮ ಕೈಬರಹದಿಂದ ಬರೆದು ತಯಾರಿಸುವ ಸಾಮರ್ಥ್ಯ ಆರ್ ಸಿ ಪಾಟೀಲ್ ರವರಿಗೆ ಇರಲಿಲ್ಲ ಅಂದರೆ ಸರಿಯಲ್ಲ. ಆ ದಿನ ಆರ್ ಸಿ ಪಾಟೀಲ್ ರವರು ನಿಡಿ–4 ನ್ನು ಹೊರತುಪಡಿಸಿ ಬೇರೆ ಯಾವುದದಾರು ದಾಖಲೆ ನೋಂದಣಿ ಮಾಡಿಸಿರುತ್ತಾರಾ ಅಂದರೆ ಸಾಕ್ಷಿ ನನಗೆ ಆ ಬಗ್ಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಿಡಿ–4 ರ ಪುಟ 3 ರಲ್ಲಿ 4 ನೇ ಪ್ಯಾರಾದ 2 ನೇ ಸಾಲಿನಲ್ಲಿ 20 ಎಂದು ಕೈಯಲ್ಲಿ ಬರೆಯಲಾಗಿದ್ದು ಅದಕ್ಕೆ ನಿಮ್ಮ ಸಹಿ ಇರುವುದಿಲ್ಲ ಅಂದರೆ ಸರಿ. ನಿಡಿ–4 ರ ಮೊದಲ ಪುಟದಲ್ಲಿ ಆರ್ ಸಿ ಪಾಟೀಲ್ ರವರ ತಂದೆಯ ಹೆಸರು ಕೈಬರಹದಲ್ಲಿ ಇರುತ್ತದೆ ಅದಕ್ಕೆ ನೀವು ಸಹಿ ಹಾಕಿಲ್ಲ ಅಂದರೆ ಸಾಕ್ಷಿ ನಾನು ಸಹಿ ಹಾಕಿಲ್ಲ, ಆರ್ ಸಿ ಪಾಟೀಲ್ ರವರ ಸಹಿಯನ್ನು ಹಾಕಿಸಿರುತ್ತೇನೆ ಎನ್ನುತ್ತಾರೆ. ನಿಡಿ–4 ನ್ನು ಆರ್ ಸಿ ಪಾಟೀಲ್ ರವರ ಮಾಹಿತಿ ಮೇರೆಗೆ ತಯಾರಿಸಿಲ್ಲ ಅಂದರೆ ಸರಿಯಲ್ಲ. 3 ನೇ ಪ್ರತಿವಾದಿ, 3 ನೇ ಪ್ರತಿವಾದಿಯ ತಂದೆ, 6, 7 ನೇ ಪ್ರತಿವಾದಿ ಮತ್ತು ವೀರಬಸಪ್ಪರವರ ಮಾಹಿತಿ ಆಧಾರದ ಮೇಲೆ ನಿಡಿ–4 ನ್ನು ಸೃಷ್ಟಿ ಮಾಡಿರುತ್ತೇನೆ ಅಂದರೆ ಸರಿಯಲ್ಲ. 6 ನೇ ಪ್ರತಿವಾದಿಯನ್ನು ನೋಡಿರುತ್ತೀರಾ ಅಂದರೆ

ಸಾಕ್ಷಿ ನೋಡಿರುತ್ತೇನೆ ಎನ್ನುತ್ತಾರೆ. 6 ನೇ ಪ್ರತಿವಾದಿಯ ಪರಿಚಯ ನಿಮಗೆ ಇರುತ್ತದೆಯಾ ಅಂದರೆ ಸಾಕ್ಷಿ ಇರುವುದಿಲ್ಲ ಎನ್ನುತ್ತಾರೆ. ಆ ದಿನ 6 ನೇ ಪ್ರತಿವಾದಿಯವರು ಉಪನೋಂದಣಿ ಕಚೇರಿಯಲ್ಲಿ ಹಾಜರಿದ್ದರು ಅಂದರೆ ಸರಿಯಲ್ಲ. ದಿನಾಂಕಃ 09.01.2012 ರಂದು ಆರ್ ಸಿ ಪಾಟೀಲ್ ಮತ್ತು 3 ನೇ ಪ್ರತಿವಾದಿಯ ಮಧ್ಯೆ ಒಂದು ದಾನಪತ್ರ ನೋಂದಣಿ ಆಗಿರುತ್ತದೆ ಅಂದರೆ ಸಾಕ್ಷಿ ಆ ಬಗ್ಗೆ ನನಗೆ ಮಾಹಿತಿ ಇಲ್ಲ ಎನ್ನುತ್ತಾರೆ. ನಿಡಿ–4 ಮತ್ತು 5 ಒಂದೇ ದಿನ, ಏಕಕಾಲಕ್ಕೆ ನೋಂದಣಿ ಆಗಿರುವ ವಿಷಯ ನಿಮಗೆ ಗೊತ್ತಿದ್ದರು ಸಹ ನಿಡಿ–5 ನೋಂದಣಿ ಆಗಿರುವ ವಿಚಾರ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಆರ್ ಸಿ ಪಾಟೀಲ್ ರವರಿಗೆ ನಿಮಗೆ ಎಷ್ಟು ಜನ ಮಕ್ಕಳು, ಅವರು ಯಾವಾಗ ಜನಿಸಿರುತ್ತಾರೆ ಮತ್ತು ನಿಮ್ಮ ಕುಟುಂಬದಲ್ಲಿ ಆಸ್ತಿಗಳ ಬಗ್ಗೆ ಯಾವಾಗ ಪಾಲು ವಿಭಾಗ ಆಗಿರುತ್ತದೆ ಎಂದು ವಿಚಾರಿಸಿರುತ್ತೀರಾ ಅಂದರೆ ಸಾಕ್ಷಿ ವಿಚಾರಿಸಿರುವುದಿಲ್ಲ ಎನ್ನುತ್ತಾರೆ. ನೀವು ಈ ಮೇಲೆ ಹೇಳಿದ ವಿಷಯದ ಬಗ್ಗೆ ಆರ್ ಸಿ ಪಾಟೀಲ್ ರವರನ್ನು ವಿಚಾರಿಸಿದ್ದರೆ ಅವರಿಗೆ ನಿಡಿ–4 ನ್ನು ಮಾಡುವ ಹಕ್ಕು ನಿಮಗೆ ಇರುವುದಿಲ್ಲ ಎಂದು ಹೇಳಬಹುದಿತ್ತು ಅಂದರೆ ಸಾಕ್ಷಿ ಆ ಬಗ್ಗೆ ವಿಚಾರಿಸುವ ಅಗತ್ಯತೆ ಇರಲಿಲ್ಲ ಎನ್ನುತ್ತಾರೆ. ಸೊರಬದಲ್ಲಿ ಒಂದೇ ಉಪನೋಂದಣಿ ಕಚೇರಿ ಇರುತ್ತದೆ ಅಂದರೆ ಸರಿ. ಉಪನೋಂದಣಿ ಕಚೇರಿಯಲ್ಲಿ ಯಾವುದೇ ಪತ್ರಗಳನ್ನು ನೋಂದಣಿ ಮಾಡಬೇಕಾದರೆ ಅನುಕ್ರಮದಲ್ಲಿ ಸರದಿ ಪ್ರಕಾರ ನೋಂದಣಿ ಮಾಡುತ್ತಾರೆ ಅಂದರೆ ಸರಿ. ಶ್ರೀ ಚೆನ್ನಬಸಪ್ಪ ಕೆ ಎನ್ ವಕೀಲರು ಸೊರಬದಲ್ಲಿ ವಕೀಲವೃತ್ತಿ ಮಾಡುತ್ತಾರೆ ಅಂದರೆ ಸರಿ. ನಿಡಿ–4 ನ್ನು ನೋಂದಾವಣೆ ಮಾಡುವ ಕಾಲಕ್ಕೆ ಉಪನೋಂದಣಿ ಕಚೇರಿಯಲ್ಲಿ ಶ್ರೀ ಚೆನ್ನಬಸಪ್ಪ ಕೆ ಎನ್ ವಕೀಲರನ್ನು ನೋಡಿರುತ್ತೀರಾ ಅಂದರೆ ಸಾಕ್ಷಿ ನಾನು ಗಮನಿಸಿಲ್ಲ ಎನ್ನುತ್ತಾರೆ. ನಿಡಿ–4 ನ್ನು ಸೃಷ್ಟಿ ಮಾಡಲು 3,6 ಮತ್ತು 7 ನೇ ಪ್ರತಿವಾದಿಗಳಿಗೆ ಸಹಕರಿಸಿರುತ್ತೇನೆ ಅಂದರೆ ಸರಿಯಲ್ಲ. ನಿಡಿ–4 ನ್ನು ತಯಾರಿಸುವ ಕಾಲಕ್ಕೆ ನೀವು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೀರಾ ಅಂದರೆ ಸಾಕ್ಷಿ ಪಹಣಿಗಳನ್ನು ಮತ್ತು ಹಿಸ್ಸಾಪತ್ರಗಳನ್ನು ಪರಿಶೀಲನೆ ಮಾಡಿರುತ್ತೇನೆ ಎನ್ನುತ್ತಾರೆ. ಆರ್ ಸಿ ಪಾಟೀಲ್ ರವರು

ನಿಡಿ–4 ನ್ನು ಮಾಡುವ ಕಾಲಕ್ಕೆ ದೈಹಿಕ ಮತ್ತು ಮಾನಸಿಕವಾಗಿ ಸದೃಢರಿರಲಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ: ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕೃತಗೊಳಿಸಲಾಯಿತು)

ನನ್ನ ಸಮಕ್ಷಮ
ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸೊರಬ.